# ಲಂಗ ದಾವಣಿಯಲ್ಲಿ ಮಿಂಚುವಳು ರೂಪಿಣಿ!

ಲಂಗ–ದಾವಣಿ ತೊಟ್ಟು ಗೆಜ್ಜೆಕಾಲಿನ ನಾದ ಮಾಡುತ್ತಾ ಕುಣಿಕುಣಿದು ಬರುವ ಪುಟಾಣಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಒಮ್ಮೆ ಮರೆಯಾಗಿದ್ದ ಲಂಗ–ದಾವಣಿ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ. 'ಇತಿಹಾಸ ಮರುಕಳಿಸುವುದು' ಎಂಬ ಮಾತು ಫ್ಯಾಷನ್ ಮಟ್ಟಿಗಂತೂ ನಿಜ ಎನಿಸುತ್ತದೆ.





■ ಕವಿತಾ ವಿನು ಭಟ್ಟ

ಘಲ್ ಘಲ್ ಗೆಜ್ಜೆ ಕಾಲಿನ ಪುಟ್ಟಪುಟ್ಟ ಹೆಣ್ಣುಮಕ್ಕಳು ವೈಯಾರದಿಂದ ಕುಣಿಯುತ್ತಾ ಬಂದರೆ ನೋಡಲು ಎರಡು ಕಣ್ಣುಗಳು ಸಾಲದು. ಕಡುಗೆಂಪು ಬಣ್ಣದ ಲಂಗಕ್ಕೆ ಹಸುರು ಬಣ್ಣದ ಬ್ಲೌಸ್, ಹಾಗೇ ಕೆಂಪು ಬಣ್ಣದ್ದೇ ದಾವಣಿ ತೊಟ್ಟರೆ ನೋಡಲು ಅಂದ ಚಂದ. ಹಾಗೇ ಕಾಂಟ್ರಾಸ್ಟ್ ಬಣ್ಣದ ಲಂಗ ದಾವಣಿ ತೊಟ್ಟು ಸಮಾರಂಭಗಳಲ್ಲಿ ಅತ್ತಿತ್ತ ಓಡಾಡುವ ಬಾಲಕಿಯರು ಎಲ್ಲರ ಕಣ್ಮಣಿ ಎನಿಸುವರು. ಈಗ ಲಂಗ ದಾವಣಿ ಫ್ಯಾಷನ್ ಆಗಿದೆ.

ಹೊಸತನದ ಗಾಳಿ ಫ್ಯಾಷನ್ ಲೋಕದಲ್ಲಿ ನಿರಂತರವಾಗಿ ಬೀಸುತ್ತಲೇ ಇರುತ್ತದೆ. ಹಳೆಯದನ್ನೇ ತಂದು ಹೊಸ ರೂಪ ಕೊಡುವ ವಿನ್ಯಾಸಕಾರರು ಟ್ರೆಂಡಿ ಡ್ರೆಸ್‌ಗಳನ್ನು ರೆಡಿ ಮಾಡಲು ಹರಸಾಹಸ ನಡೆಸುತ್ತಾರೆ. ಈ ಮಾತಿಗೆ ಪುಷ್ಟಿ ನೀಡುವಂತೆ, ಮೊದಲೆಲ್ಲ ಲಂಗದಾವಣಿಯನ್ನು ಹಳ್ಳಿ ಹುಡುಗಿಯರ ಟ್ರೇಡ್‌ಮಾರ್ಕ್ ಎಂಬಂತೆ ಬಿಂಬಿಸಲಾಗುತ್ತಿತ್ತು. ಕೇವಲ ಬಣ್ಣಗಳ ಆಯ್ಕೆಗೆ ಸೀಮಿತವಾಗಿದ್ದ ಈ ಸಾಂಪ್ರದಾಯಿಕ ಉಡುಗೆಗೂ ಬದಲಾವಣೆಯ ಗಾಳಿ ಬೀಸಿದೆ.